# ನಿಮ್ರತ್ ದಿಟ್ಟತನ



ಒಂದಲ್ಲ, ಎರಡಲ್ಲ ಬರೋಬ್ಬರಿ 450!– ಇದು ನಟಿ ನಿಮ್ರತ್ ಕೌರ್ ತಿರಸ್ಕರಿಸಿರುವ ಕಥೆಗಳ ಸಂಖ್ಯೆ! ನಿಮ್ರತ್ ಕೌರ್ ಎಂದರೆ ಎಲ್ಲೋ ಕೇಳಿದಂತೆ ಇದೆಯಲ್ಲ ಈ ಹೆಸರು ಎನಿಸುತ್ತದೆ ನಿಜ. ಬಿ–ಟೌನಿನಲ್ಲಿ ದಿನಕ್ಕೊಂದು ಗದ್ದಲ, ಗಾಸಿಪ್ ಹುಟ್ಟುಹಾಕುವ ನಟಿಯರ ನಡುವೆ ಕಳೆದುಹೋಗಿರುವ ಪ್ರತಿಭಾವಂತೆ ಈಕೆ. ಹೀಗಾಗಿ ತಕ್ಷಣಕ್ಕೆ ಈಕೆ ಯಾರೆಂದು ನೆನಪಾಗುವುದು ಕಷ್ಟ. ಅದೇ 'ಲಂಚ್‌ಬಾಕ್ಸ್'ನ ನಟಿ ಎಂದಾಕ್ಷಣ ಈಕೆಯ ಮನೋಜ್ಞ ಅಭಿನಯ ಕಣ್ಣಮುಂದೆ ಬರುತ್ತದೆ. 'ಲಂಚ್‌ಬಾಕ್ಸ್' ಚಿತ್ರ ವಿಶ್ವ ಮಟ್ಟದಲ್ಲಿ ಖ್ಯಾತಿ ಗಳಿಸಿತು. ನಿಮ್ರತ್ ಅಭಿನಯವನ್ನೂ ಎಲ್ಲರೂ ಮೆಚ್ಚಿದರು. ಆದರೆ ಸಿನಿಮಾ ಬಿಡುಗಡೆಯಾದ ಹಲವು ತಿಂಗಳು ಬಳಿಕವೂ ಹೇಳಿಕೊಳ್ಳುವಂಥ ಅವಕಾಶಗಳೇನೂ ಸಿಗುತ್ತಿಲ್ಲ. ಅವಕಾಶಗಳು ಬಂದಿದ್ದರೂ ಮನಸಿಗೆ ಒಪ್ಪಿಗೆಯಾಗದೆ ಆಕೆ ನಿರಾಕರಿಸಿದ್ದಾಳಂತೆ. 'ಲಂಚ್‌ಬಾಕ್ಸ್'ನಂಥ ಚಿತ್ರದಲ್ಲಿ ನಟಿಸಿ ಕಳಪೆ ಗುಣಮಟ್ಟದ ಕಥನಗಳನ್ನು ಒಪ್ಪಿಕೊಳ್ಳುವುದಾದರೂ ಹೇಗೆ ಎಂಬುದು ನಿಮ್ರತ್ ತರ್ಕ. ಆದರೂ ನಿಮ್ರತ್ ಮನೆ ಮುಂದೆ ನಿಲ್ಲುವ ನಿರ್ಮಾಪಕರ ಸಂಖ್ಯೆಗೇನೂ ಕಡಿಮೆ ಇಲ್ಲ. ಈ ಎರಡು ವರ್ಷದ ಅವಧಿಯಲ್ಲಿ ತಿರಸ್ಕರಿಸಿರುವ ಕಥೆಗಳ ಸಂಖ್ಯೆ ಸುಮಾರು 450 ಎಂದು ಆಕೆಯೇ ಹೇಳಿಕೊಂಡಿದ್ದಾಳೆ. ತೀರಾ ಕಮರ್ಷಿಯಲ್ ಎನಿಸುವ ಕಥನಗಳೇ ಬಂದಿದ್ದರಿಂದ ಎಲ್ಲದಕ್ಕೂ ನಿಮ್ರತ್ ಒಲ್ಲೆ ಎಂದಿದ್ದಾರಂತೆ.

ಅಂದ ಹಾಗೆ, ನಿಮ್ರತ್ ವಿದೇಶದಲ್ಲಿಯೂ ಬೇಡಿಕೆ ಗಳಿಸಿರುವ ನಟಿ. ಸದ್ಯಕ್ಕೆ ಅವರದು ಕೇಪ್‌ಟೌನ್‌ನಲ್ಲಿ ವಾಸ್ತವ್ಯ. ವಿದೇಶಿ ಚಾನೆಲ್‌ವೊಂದರ 'ಹೋಮ್‌ಲ್ಯಾಂಡ್' ಎಂಬ ಧಾರಾವಾಹಿಯಲ್ಲಿ ನಿಮ್ರತ್ ನಟಿಸುತ್ತಿದ್ದಾರೆ. ಅಲ್ಲಿ ಬಿಡುವಿಲ್ಲದ ಕೆಲಸ ಅವರದಂತೆ. ತಾಲೀಮಿಗೂ ಸಮಯವಿಲ್ಲದೆ ನಿರಂತರವಾಗಿ ಕ್ಯಾಮೆರಾ ಮುಂದೆ ನಿಲ್ಲುತ್ತಿದ್ದೇನೆ ಎನ್ನುತ್ತಾರೆ ನಿಮ್ರತ್. ಸಿನಿಮಾಕ್ಕಿಂತ ವಿಭಿನ್ನವಾದ ಅನುಭವವನ್ನು ಧಾರಾವಾಹಿ ಅವರಿಗೆ ನೀಡಿದೆಯಂತೆ. ವಿಶೇಷವೆಂದರೆ, 'ಲಂಚ್‌ಬಾಕ್ಸ್'ನ ಅಭಿನಯ ನೋಡಿಯೇ ಈ ವಿದೇಶಿ ಧಾರಾವಾಹಿಯಲ್ಲಿ ಅವರಿಗೆ ಅವಕಾಶ ದಕ್ಕಿರುವುದು.



# ಕರಿಷ್ಮಾ ಮದುವೆ ಇಲ್ಲ

ಕರಿಷ್ಮಾ ಕಪೂರ್ ಪತಿ ಸಂಜಯ್ ಕಪೂರ್ ಅವರಿಂದ ದೂರವಾಗಿ ದಶಕವೇ ಕಳೆಯುತ್ತಿದೆ. ತಂಗಿ ಕರೀನಾ ಕಪೂರ್‌ಗೆ ಹೋಲಿಸಿದರೆ ಬಾಲಿವುಡ್‌ನಲ್ಲಿ ಸದ್ದು ಮಾಡಿದರೂ ಕರಿಷ್ಮಾ ಅಂಥ ಚಾರ್ಮ್ ಹೊಂದಿರಲಿಲ್ಲ. ಹೀಗಾಗಿ 'ಡೇಂಜರಸ್ ಇಶ್ಕ್' ಮೂಲಕ ಬಣ್ಣದ ಲೋಕದ ಮರುಪ್ರವೇಶಕ್ಕೆ ಪ್ರಯತ್ನಿಸಿದರೂ ಅದರ ಹೀನಾಯ ಸೋಲು ಹಿಂದಡಿಯಿಡುವಂತೆ ಮಾಡಿತು. ಇನ್ನು ಆಗಾಗ ಕರಿಷ್ಮಾರ ಮದುವೆ ಸುದ್ದಿ ಕೇಳಿಬರುತ್ತಲೇ ಇತ್ತು. ಅದರಲ್ಲೂ ಕರೀನಾ ಮತ್ತು ಸೈಫ್ ಜೋಡಿಯಾಗುವಾಗ ಕರಿಷ್ಮಾರ ಮರುಮದುವೆಯೂ ಸುದ್ದಿಯಾಗಿತ್ತು. ಇದನ್ನೆಲ್ಲಾ ಸುಳ್ಳು ಸುದ್ದಿ ಎಂದು ಕರಿಷ್ಮಾ ನಿರಾಕರಿಸುತ್ತಲೇ ಇದ್ದರು.

ಈಗ ಅವರ ಮದುವೆಯ ಸುದ್ದಿ ಮತ್ತೆ ಎದ್ದಿದೆ. ಪತ್ನಿಯಿಂದ ವಿಚ್ಛೇದನಕ್ಕೆ ಮುಂದಾಗಿರುವ ಉದ್ಯಮಿ ಸಂದೀಪ್ ತೋಷ್ನಿವಾಲ್ ಜತೆ ಕರಿಷ್ಮಾ ಹಸೆಮಣೆ ಏರಲಿದ್ದಾರೆ ಎನ್ನಲಾಗುತ್ತಿದೆ. ಅಕ್ಕನ ಕುರಿತ ಈ ವದಂತಿಗಳನ್ನು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ ಕರೀನಾ.

ಪತಿಯಿಂದ ದೂರವಾಗಿದ್ದರೂ ಕರಿಷ್ಮಾರ ವಿಚ್ಛೇದನ ಪ್ರಕರಣಕ್ಕೆ ಇನ್ನೂ ಮುಕ್ತಿ ದೊರೆತಿಲ್ಲ. ಒಟ್ಟಿಗಿದ್ದು ಜಗಳವಾಡುತ್ತಾ ವಿಚ್ಛೇದನಕ್ಕೆ ಕಾಯುವ ಬದಲು ದೂರವಿದ್ದರೆ ಸ್ವಲ್ಪ ನೆಮ್ಮದಿಯಾದರೂ ದಕ್ಕುತ್ತದೆ ಎನ್ನುವುದು ಕರೀನಾ ಅಭಿಪ್ರಾಯ. 'ಸದ್ಯಕ್ಕೆ ಅಕ್ಕನ ಮನಸ್ಥಿತಿ ಸರಿಯಾಗಿಲ್ಲ. ಆಕೆ ತುಂಬಾ ನೊಂದಿದ್ದಾಳೆ. ಆಕೆಯ ಪಾಡಿಗೆ ಅವಳನ್ನು ಬಿಟ್ಟುಬಿಡಿ' ಎನ್ನುವುದು ಕರೀನಾ ಮನವಿ.

■ ಅಮಿ